ಅಸಲು ದಾವಾ ನಂ.121/2016
ಡಿ ಡಬ್ಲ್ಯೂ :2

(ಇಂದು ದಿನಾಂಕಃ 07.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ ಕೆ ಎಲ್ ಎನ್ ರವರಿಂದಃ

ನನ್ನನ್ನು ಈ ದಿನ 2ನೇ ಪ್ರತಿವಾದಿ ಕರೆದುಕೊಂಡು ಬಂದಿರುತ್ತಾರೆ. ನಮ್ಮ ಮತ್ತು 2ನೇ ಪ್ರತಿವಾದಿಯ ನಡುವೆ 700-800 ಮೀಟರ್ ದೂರ ಇದೆ. ಈ ದಾವೆಯನ್ನು ಮೇರಿರವರು 2ನೇ ಪ್ರತಿವಾದಿ ವಿರುದ್ಧ ಸಲ್ಲಿಸಿರುತ್ತಾರೆ. ನಿಕೋಲಸ್ ಫರ್ನಾಂಡಿಸ್ ರವರ ಬಗ್ಗೆ ಗೊತ್ತಿಲ್ಲ. ಅವರ ಜಮೀನು 700-800 ಮೀಟರ್ ದೂರ ಇದೆ. ರಾಜುರವರ ಜಮೀನಿನ ಪಕ್ಕ ನಿಕೋಲಸ್ ಫರ್ನಾಂಡಿಸ್ ರವರ ಜಮೀನು ಇರುತ್ತದೆ. ನಿಕೋಲಸ್ ಫರ್ನಾಂಡಿಸ್ ರವರ ಜಮೀನಿನ ಸರ್ವೆ ನಂಬರ್ 182, ವಿಸ್ತೀರ್ಣ 2 ಎಕರೆ 7 ಗುಂಟೆ ಇರುತ್ತದೆ. ಸದರಿ ಆಸ್ತಿಯ ಪೂರ್ವಕ್ಕೆ ಗುಂಡಪ್ಪ ಜಮೀನು, ಪಶ್ಚಿಮಕ್ಕೆ ರಾಜುರವರ ಜಮೀನು, ಉತ್ತರಕ್ಕೆ ರಂಗೇಗೌಡರ ಜಮೀನು, ದಕ್ಷಿಣಕ್ಕೆ ವಾದಿಯರ ಜಮೀನು ಇರುತ್ತದೆ. ವಾದಿಯರು ಸದರಿ ಜಮೀನನ್ನು ನಿಕೋಲಸ್ ಎನ್ನುವವರಿಗೆ 1 ಎಕರೆ 26 ಗುಂಟೆ ಮಾರಾಟ ಮಾಡಿರುತ್ತಾರೆ. ಸರ್ವೆ ನಂಬರ್ 182 ರಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದು ಗೊತ್ತಿಲ್ಲ.

ನಿಕೋಲಸ್ ಫರ್ನಾಂಡಿಸ್ ರವರಿಗೆ ಮಾರಾಟ ಮಾಡಿದ ಆಸ್ತಿ ವಾದಿಗೆ ಡಿಕ್ಲರೇಶನ್ ಮೂಲಕ ಬಂದಿರುತ್ತದೆ. ಎಷ್ಟು ಎಕರೆ ಬಂದಿರುತ್ತದೆ ಎಂದು ಗೊತ್ತಿಲ್ಲ. ವಾದಿ ಮಾರಾಟ ಮಾಡಿ ಎಷ್ಟು ಜಮೀನನ್ನು ಉಳಿಸಿಕೊಂಡಿದ್ದಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯ ಮೂಲ ಹೆಸರು ಗೊತ್ತಿಲ್ಲ. 2ನೇ ಪ್ರತಿವಾದಿಗೆ ಡಿಕ್ಲರೇಶನ್ ಮೂಲಕ ಬಂದಿದ್ದು ಯಾರಿಂದ ಬಂದಿರುತ್ತದೆ ಎಂದು ಗೊತ್ತಿಲ್ಲ. 1990 ರಲ್ಲಿ ಡಿಕ್ಲರೇಶನ್ ಮೂಲಕ 2ನೇ ಪ್ರತಿವಾದಿಗೆ ಬಂದಿರುತ್ತದೆ. 14 ಗುಂಟೆ ಜಮೀನಿನ ಚೆಕ್ಕುಬಂದಿ ಗೊತ್ತಿಲ್ಲ. ದಾವೆಯನ್ನು ಯಾವ ಸರ್ವೆ ನಂಬರ್ ಮತ್ತು ಎಷ್ಟು ವಿಸ್ತೀರ್ಣಕ್ಕೆ ಸಲ್ಲಿಸಿರುತ್ತಾರೆಂದು ಗೊತ್ತಿಲ್ಲ. ಸದರಿ ವಿಚಾರಗಳ ಬಗ್ಗೆ ನಾನು ಕೇಳಿಕೊಂಡಿರುವುದಿಲ್ಲ.

ವಾದಿ ದಾವಾ ಅನುಸೂಚಿಯಲ್ಲಿ ತೋರಿಸಿದ ಸರ್ವೆ ನಂಬರ್ ವಿಸ್ತೀರ್ಣ ಮತ್ತು ಚೆಕ್ಕುಬಂದಿಗೆ ಸಲ್ಲಿಸಿರುವ ವಿಚಾರವನ್ನು ನಾನು ತಿಳಿದುಕೊಂಡಿಲ್ಲ. 2ನೇ ಪ್ರತಿವಾದಿ ಮಾಡುತ್ತಿರುವ ಜಮೀನಿಗೆ ಸಂಬಂಧಿಸಿದಂತೆ ಸಾಕ್ಷಿ ಹೇಳುತ್ತಿದ್ದೇನೆ. 1 ಮತ್ತು 2ನೇ ಪ್ರತಿವಾದಿ ಜಮೀನುಗಳಿಗೆ 100 ಮೀಟರ್ ಅಂತರ ಇರುತ್ತದೆ. 1ನೇ ಪ್ರತಿವಾದಿ ಖರೀದಿಸಿರುವ ಜಮೀನಿನ ಪಕ್ಕದಲ್ಲಿ 2ನೇ ಪ್ರತಿವಾದಿ ಜಮೀನು ಇರುತ್ತದೆ. ಸರ್ವೆ

ನಂಬರ್ 182 ರಲ್ಲಿ 4 ಎಕರೆ ಜಮೀನು ಇರುವ ವಿಚಾರ ಗೊತ್ತಿಲ್ಲ. ಸದರಿ ವಿಸ್ತೀರ್ಣದಲ್ಲಿ ವಿಶ್ವನಾಥ್ ಬಿನ್ ಮುರುಗಪ್ಪ ಇರುವ ವಿಚಾರ ಗೊತ್ತಿಲ್ಲ. ಕೆ.ಪಿ ಕೃಷ್ಣೇಗೌಡ ಬಿನ್ ಪುಟ್ಟೇಗೌಡರು 1 ಎಕರೆ 26 ಗುಂಟೆಯಲ್ಲಿರುತ್ತಾರೆ. ನಿಕೋಲಸ್ ರವರು 1 ಎಕರೆ 26 ಗುಂಟೆಯಲ್ಲಿರುತ್ತಾರೆ. ಅದೇ ರೀತಿ ಇಗ್ನೇಶಿಯಸ್ ಫರ್ನಾಂಡಿಸ್ ರವರು ಸರ್ವೆ ನಂಬರ್ 182 ರಲ್ಲಿ 14 ಗುಂಟೆ ವಿಸ್ತೀರ್ಣದಲ್ಲಿರುವ ವಿಚಾರ ಗೊತ್ತಿಲ್ಲ. 2ನೇ ಪ್ರತಿವಾದಿ 2 ಎಕರೆ 7 ಗುಂಟೆಯಲ್ಲಿ ಇರುತ್ತಾರೆ. ಪ್ರತಿವಾದಿಯರು ದಾವಾ ಆಸ್ತಿಯ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನನಗೆ ಈ ಕೇಸಿನ ಬಗ್ಗೆ ಏನೂ ಗೊತ್ತಿಲ್ಲದಿದ್ದರೂ ಸಹ ವಾದಿಯರಿಗೆ ಅನಾನುಕೂಲ ಮಾಡುವ ಉದ್ದೇಶಿದಿಂದ 2ನೇ ಪ್ರ2ವಾದಿ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ:- ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು